# ಸರ್ವಧರ್ಮ ಸಮ್ಮೇಲನ, ನವಿಲುಗುಂದ

೨೪-೪-೧೯೬೬

## ಅಧ್ಯಕ್ಷರ ಭಾಷಣ

ಅಧ್ಯಕ್ಷರು

ವಿದ್ಯಾರತ್ನ ಸಿದ್ಧಯ್ಯ ಕಲ್ಲಿನಾಥಶಾಸ್ತ್ರೀ ಪುರಾಣಿಕ

ಬಿ.ಎ.,ಎಲ್ಎಲ್.ಬಿ., ಐ.ಎ.ಎಸ್

ಯಸ್ಮಿನ್ ಯಸ್ಯ ಯತೋ ಯಸ್ಮಾತ್
ಯೇನ ಯಮ್‌ಯ ಇದಮ್ ಸ್ವಯಮ್
ಯೋಽಸ್ಮಾತ್ ಪರಸ್ಮಾತ್ ಚ ಪರಃ
ತಂ ಪಪ್ರದ್ಯೇ ಸ್ವಯಂಭುವಮ್ !

ಮಹಾಸ್ವಾಮಿಗಳವರೆ, ಮಹಿಮರೆ, ಮಹನೀಯರೆ, ಮಾತೆಯರೆ,

ಶ್ರೀ ಮನ್ನಿರಂಜನ ಪ್ರಣವಸ್ವರೂಪಿಗಳೂ ಪರಂಜ್ಯೋತಿ ಸ್ವರೂಪರೂ ಆದ ಶ್ರೀಶ್ರೀ ಬಸವಲಿಂಗ ಮಹಾಸ್ವಾಮಿಗಳವರ ಸಮನ್ವಯ ದೃಷ್ಟಿಯ ದ್ಯೋತಕವಾಗಿ ನಡೆದು ಬಂದಿರುವ ಈ ಸರ್ವಧರ್ಮ ಸಮ್ಮೇಲನವು ಈ ವರ್ಷ ಮಹಾತ್ಮರಾದ ಮೃತ್ಯಂಜಯ ಮಹಾಸ್ವಾಮಿಗಳವರ ಕರಕಂಜಸಂಜಾತರೂ, ಧಾರವಾಡದ ಮುರುಘಾ ಮಠಾಧ್ಯಾಕ್ಷರೂ, ಮಹಾನುಭಾವಿಗಳೂ ಆಗಿರುವ ಶ್ರೀಮನ್ನಿರಂಜನ ಪ್ರಣವಸ್ವರೂಪಿ ಶ್ರೀಶ್ರೀ ಮಹಾಂತ ಶಿವಯೋಗಿಗಳವರ ನೇತೃತ್ವದಲ್ಲಿ, ಎಡೆಯೂರ ಶ್ರೀಜಗದ್ಗುರು ತೋಂಟದ ಶ್ರೀ ಸಿದ್ದಲಿಂಗೇಶ್ವರರ ಕೃಪಾಛತ್ರಛಾಯೆಯಲ್ಲಿ, ಹೆಸರಾಂತ ಹರಗುರು ಚರಮೂರ್ತಿಗಳ, ಪ್ರಸಿದ್ಧ ಪಂಡಿತರ ಪರಿಣತರ ಸಮ್ಮುಖದಲ್ಲಿ ನಡೆದಿರುವುದು ಮಹಾನಂದಮಯವಾದುದು. ಈ ದಿವ್ಯ ಪರಿಸರಕ್ಕೆ ತಕ್ಕವನಲ್ಲದವನು ಇಲ್ಲಿ ಯಾರಾದರೂ ಇದ್ದರೆ ಸಮ್ಮೇಲನಾಧ್ಯಕ್ಷನಾಗಿ ಬಂದಿರುವ ಸಿದ್ಧಯ್ಯ ಪುರಾಣಿಕನೇ! ಆದರೂ ಬಂದಿದ್ದಾನೆ—ಶ್ರೀಗಂಧದ ಸನ್ನಿಧಿಯಲ್ಲಿ ಬೇವು-ಬೊಬ್ಬುಳಿ ಸುಗಂಧಿತವಾದೀತೆಂಬ ವಿಶ್ವಾಸದಿಂದ ಬಂದಿದ್ದಾನೆ; ಜ್ಯೋತಿ ಮುಟ್ಟಿದ ಬತ್ತಿ ಜ್ಯೋತಿಯಾದೀತೆಂಬ ಸದಾಶೆಯಿಂದ ಬಂದಿದ್ದಾನೆ; ತುಂಬಿಯ ನೆನೆದು ಕೀಡೆ ತುಂಬಿಯಾದೀತೆಂಬ ನಂಬಿಕೆಯಿಂದ ಬಂದಿದ್ದಾನೆ. ಅವನ ನಂಬಿಕೆ ನಿಜವಾಗುವಂತೆ ಇಲ್ಲಿ ಧರ್ಮದ "ಚಂದನವ ಕಡಿದು ಕೊರಡು ತೇಯಲಿ"; ಧರ್ಮದ ದೀಪ ಹೊತ್ತಿ ದೇದೀಪ್ಯಮಾನವಾಗಿ ಬೆಳಗಲಿ; ಧರ್ಮದ ಅರವಿಂದ ಅರಳಿ ಮಕರಂದಕ್ಕೆರಗಿದ ದುಂಬಿಗಳ ದಿವ್ಯನಿನಾದ ಪಸರಿಸಲಿ!

"ಸರ್ವಾರಂಭಾಹಿ ದೋಷೇಣ ಧೂಮೇನಾಗ್ನಿರಿವಾವೃತಾಃ" ಎಂದು ಸಾರಿದ ಗೀತಾಚಾರ್ಯ ಶ್ರೀಕೃಷ್ಣ; 'ನಾತ್ಯಂತಂ ಗುಣವತ್ ಕಿಂಚಿತ್ ನಾತ್ಯಂತಂ ದೋಷವತ್ ತಥಾ' ಎಂದು ಸಾರಿದರು ವೇದವ್ಯಾಸರು ಮಹಾಭಾರತದಲ್ಲಿ. ಆದುದರಿಂದಲೇ ಜೀವನವು ಪರಸ್ಪರ ವಿರೋಧಿಗಳಾದ ದ್ವಂದ್ವ ದೋಷಗಳಲ್ಲಿ ನಡೆದ ನಿರಂತರವಾದ ಆಯ್ಕೆಯಾಗಿದೆ.* ಮಾನವನು ಸಹಜವಾಗಿ, ಸ್ವಾಭಾವಿಕವಾಗಿ ಕನಿಷ್ಠ ದುಃಖವನ್ನು ಕೊಟ್ಟು ಗರಿಷ್ಠ ಸುಖವನ್ನು ಕೊಡುವುದನ್ನೇ ಆಯ್ದುಕೊಳ್ಳಲು ಅಪೇಕ್ಷಿಸುತ್ತಾನೆ. ಅವನ ಆಯ್ಕೆ ಸಫಲವಾಗಬೇಕಾದರೆ ಅದಕ್ಕೆ ಶತಶತಮಾನಗಳ ಅನುಭವರಸಾಯನವಾದ

---

* Life is a perpetual choice between endles pairs of rival ills.

ಧರ್ಮದ ಮಾರ್ಗದರ್ಶನ ಬೇಕು. ಧರ್ಮವೇ ದಿಕ್ಕು ತಪ್ಪಿದವರ ಧ್ರುವತಾರೆ, ದಾರಿಕಾರರ ದಾರಿದೀಪ. ಬಡವಬಲ್ಲಿದರೆನ್ನದೆ ಎಲ್ಲರಿಗೂ ಅಡಿಗಡಿಗೆ ನೊಡರಾಗಿ ನಿಲ್ಲುವುದು ಧರ್ಮವೇ. ಅದನ್ನು ರಕ್ಷಿಸಿರಿ, ಅದು ನಿಮ್ಮನ್ನು ರಕ್ಷಿಸುವುದೆಂದು ಆದೇಶವಿತ್ತರು ಎಮ್ಮವರು.

ಆದರೆ 'ಧರ್ಮದ ಸ್ವರೂಪ ಇದೇ ಕೊನೆಯದು' ಎಂದು ಸುಗ್ರೀವಾಜ್ಞೆಯನ್ನು ಇತ್ತು ಹೋಗಲಿಲ್ಲ ಅವರು. ಯುಗರೂಪಾನುಸಾರಿಯಾಗಿ ಧರ್ಮದ ಸ್ವರೂಪವೂ ಪರಿವರ್ತಿತವಾಗುತ್ತಲೇ ಹೋಗಬೇಕು.* ಅದರ ಆತ್ಮ, ಒಳಗು ಅಪರಿವರ್ತನೀಯ, ಆದರೆ ಅದರ ಶರೀರ, ಹೊರಗು ಪರಿವರ್ತನಶೀಲ. ಅಲ್ಲದೇನು ? ಕಾಲಕ್ಕೆ ತಕ್ಕಂತೆ ಬಾಲ್ಯ, ಯೌವನ, ಜರೆ, ಮರಣಗಳನ್ನು ಮಾನವಶರೀರ ಅನುಭವಿಸುವಂತೆ ಧರ್ಮದ ಶರೀರವೂ ಅನುಭವಿಸುತ್ತದೆ. ಆಗ ಹಳಬಟ್ಟೆಗಳನ್ನು ಕಳಚಿ ಹೊಸ ಬಟ್ಟೆಗಳನ್ನು ಮಾನವ ದೇಹ ಧರಿಸುವಂತೆ ಧರ್ಮದ ದೇಹವೂ ಧರಿಸುತ್ತದೆ, ಧರಿಸಬೇಕು. ಧರ್ಮವಿರುವುದು ಧರ್ಮಕ್ಕಾಗಿಯಲ್ಲ. ಮಾನವನ ಅಭ್ಯುದಯ ನಿಃಶ್ರೇಯಸ ಸಿದ್ಧಿಗಾಗಿ. ಕಾಲಕ್ರಮದಲ್ಲಿ ಧರ್ಮಜ್ಯೋತಿಗೆ ಮಂಕು ಕವಿದರೆ ಆ ಮಂಕನ್ನು ನಿಸ್ಸಂಕೋಚವಾಗಿ ತೆಗೆಯಿರೆಂದರು ನಮ್ಮವರು; ಆ ಮಂಕಿಗೇ ಕೈಮುಗಿಯಿರೆನ್ನಲಿಲ್ಲ. ನಾರದರು ನುಡಿದುದೇನು ? 'ಧರ್ಮಶಾಸ್ತ್ರವಿರೋಧೇತು ಯುಕ್ತಿಯುಕ್ತೋ ವಿಧಿಃ ಸ್ಮೃತಃ" ! ಧರ್ಮ ಪರಾಯಣತೆ ಯುಕ್ತಿ ಶೂನ್ಯತೆಗೆ ಎಡೆಗೊಡಬಾರದು. ಕಾಲಕಾಲಕ್ಕೆ ಯುಕ್ತಿಯುಕ್ತವಾಗುತ್ತ ಹೋಗಬೇಕು ಧರ್ಮ.

ಏಕೆ ? ಹೊಸ ಯುಗವು ಹೊಸ ಸಮಸ್ಯೆಗಳನ್ನೂ, ಸಂದೇಹಗಳನ್ನೂ, ಸಂದಿಗ್ಧತೆಗಳನ್ನೂ,-ಅಂತೆಯೇ ಹೊಸ ಅನುಭವ, ವಿಚಾರ, ಶೋಧನೆ, ದರ್ಶನಗಳನ್ನು ಹೊತ್ತು ತರುತ್ತದೆ. ಅವು ಧರ್ಮದಿಂದ ಪ್ರಭಾವಿತವಾಗಿರಬಹುದು, ಇಲ್ಲದಿರಬಹುದು- ಧರ್ಮ ಅವುಗಳಿಂದ ಪ್ರಭಾವಿತವಾಗದೆ ಉಳಿಯಲಾರದು, ಉಳಿಯಬಾರದು. ಹಾಗೆ ಪ್ರಭಾವಿತವಾದಾಗ ಅದರ ಒಳಗು ಎಂದಿನಂತೆಯೇ ಉಳಿದರೂ, ಅದರ ಹೊರಗು ಹೊಸ ಮಾರ್ಪಾಟನ್ನು ಹೊಂದುತ್ತದೆ. ಅದು ಅದರ ಸಜೀವತೆಗೆ ಸಾಕ್ಷಿ. ಹಾಗೆ ಅದು ಮಾರ್ಪಾಟು ಹೊಂದದೇ ಹೋದರೆ ಅದು ಅದರ ನಿರ್ಜೀವತೆಗೆ ನಿದರ್ಶನ.

ಇಂದಿನ ವಿಜ್ಞಾನವನ್ನೇ ತೆಗೆದುಕೊಳ್ಳುವ. ಮೊದಮೊದಲು ಧರ್ಮರವಿಗೆ ರಾಹುವಾಗಿ ಬಂದಿದೆಯೆಂಬಂತೆ ತೋರಿತು ವಿಜ್ಞಾನ. ಆದರೆ ಈ ಅಜ್ಞಾನವೀಗ ಅಳಿಯುತ್ತ ನಡೆದಿದೆ. "Only the genueine men of science, we say, can truly know how utterly beyond not only human knowledge but

---

* 'ಅನ್ಯೋ ಕೃತಯುಗೇ ಧರ್ಮಸ್ತ್ರೇತಾಯಾಂ ದ್ವಾಪರೇ ಪರೇ
ಅನ್ಯಃ ಕಲಿಯುಗೇ ನೃಣಾಂ ಯುಗರೂಪಾನುಸಾರತಃ'—ಪರಾಶರಃ
'ಯತೋಭ್ಯುದಯ ನಿಃಶ್ರೇಯಸ ಸಿದ್ಧಿಃ ಸಧರ್ಮಃ.'—ಕಣಾದ



human conception is the universal power of which nature and life and thought are manifestations" ಎಂದು ಸಾರಿದ ಹರ್ಬರ್ಟ್ ಸ್ಪೆನ್ಸರನಿಂದ, "I believe in God ...who reveals Himself in the orderly harmny of the universe. I believe that Intelligence is manifested Througout all Nature The basis of scientific work is the conviction that the world is an ordered and comprehensible entity and not a thing of chance,' ಎಂದು ಒಪ್ಪಿದ ಆಲ್ಬರ್ಟ್ ಐನ್‌ಸ್ಟೈನರವರೆಗೆ ಅನೇಕರು ಧರ್ಮ ವಿಜ್ಞಾನಗಳ ಅವಿರೋಧತೆಯನ್ನು ಎತ್ತಿ ತೋರಿಸಿ, 'Religion can exist without science, but there is no science writhout religion' ಎನ್ನುವಷ್ಟರಮಟ್ಟಿಗೆ ಮುಂದೆ ಹೋಗಿದ್ದಾರೆ. ಧರ್ಮಬಾಹಿರವೆನಿಸಿದ್ದ ರಾಷ್ಟ್ರವೊಂದರಲ್ಲಿ ಧರ್ಮದ ಪುನರುದಯವಾಗುತ್ತಲಿದೆಯೆಂಬ ಸುದ್ದಿಯನ್ನೂ ಓದಿದ್ದೇವೆ.

ಆದರೆ ಇದುವರೆಗಿನ ಧರ್ಮ-ವಿಜ್ಞಾನಗಳ ಘರ್ಷಣೆಯಲ್ಲಿ ಧರ್ಮವು ವಿಜ್ಞಾನದಿಂದ ಪ್ರಭಾವಿತವಾಗದೆ ಉಳಿದಿದೆಯೆಂದು ಎದೆತಟ್ಟಿ ಹೇಳಬಲ್ಲವರಾರು ? ಆದುದರಿಂದಲೇ: ಧರ್ಮದ ಬಗ್ಗೆ ನಾವು ತಳೆಯ ಬೇಕಾದ ಧೋರಣೆ—"In essentials, in principles, in great things—unity; in non-essentials, details, small and superficial things—liberty. in all things—charity" ಆಗಿರಬೇಕೆಂದು ಸ್ವರ್ಗೀಯ ಭಾರತರತ್ನ ಡಾ. ಭಗವಾನದಾಸರು ಹೇಳಿರುವುದು ಸರ್ವ ಸಮಂಜಸವಾದುದಾಗಿದೆ.

ಈ ದೃಷ್ಟಿ, ಈ ಧೋರಣೆ ನಮ್ಮ ಧರ್ಮದ ಉಳಿವಿಗೆ ಸಾಧಕವಾಗುವಂತೆಯೇ ಅನ್ಯಧರ್ಮಗಳ ಬಗೆಗೆ,ಸಹಿಷ್ಣುತೆಗೂ ಸಹಾಯಕವಾಗುತ್ತದೆ. ಪ್ರಪಂಚದ ಪ್ರಮುಖ ಧರ್ಮಗಳು ಏಷ್ಯಾದಲ್ಲಿ ಉದಿಸಿದ್ದರೆ ಅವುಗಳಲ್ಲಿ ಹೆಚ್ಚಿನವು ಭರತಭೂಮಿಯಲ್ಲಿ ಹುಟ್ಟಿವೆ. ಆದುದರಿಂದಲೇ ಇದು ಧರ್ಮಭೂಮಿಯೆಂಬ ಹೆಸರನ್ನು ಪಡೆದಿದೆ. ಇದನ್ನರಿತೇ ರಾಷ್ಟ್ರಪಿತ ಗಾಂಧೀಜಿಯವರು ವಿಶ್ವರಂಗದಲ್ಲಿ ಭಾರತದ ಪಾತ್ರವೇನೆಂಬ ಬಗ್ಗೆ ತಮ್ಮ ಅಭಿಪ್ರಾಯವನ್ನಿಂತು ವ್ಯಕ್ತಪಡಿಸಿದ್ದಾರೆ: "I feel that India's mission is defferent from that of others. India is fitted for the religious supremacy of the world. There is no parallel in the world for the process of purification that this country has voluntarily undergone..India can win all by soul force."

ಭಾರತಕ್ಕೆ ಪ್ರಪಂಚದಲ್ಲಿ ಧಾರ್ಮಿಕ ಪಾರಮ್ಯ ಪ್ರಾಪ್ತವಾಗಬೇಕಾದರೆ, ಭಾರತವು ತನ್ನ ಆದನ್ಯ ಆತ್ಮಶಕ್ತಿಯಿಂದ ಸರ್ವಜಿತುವಾಗಿ ದಿಗ್ವಿಜಯಕ್ಕೆ ಅಣಿಯಾಗಬೇಕಾದರೆ, ಇಲ್ಲಿರುವ ಎಲ್ಲ ಧರ್ಮಗಳಲ್ಲಿ ಸಹಿಷ್ಣುತೆ, ಸಾಮರಸ್ಯ, ಸಹಾನುಭೂತಿ ಈಗಿರುವುದಕ್ಕಿಂತಲೂ ಹೆಚ್ಚಾಗಿ ಬೆಳೆದು ಬೇರೂರಬೇಕು. 'ಬಂದವರಿಗೆ

ತಂದೆತಾಯಿ' ಯಾಗಿ ಉಳಿದು ಬೆಳೆದು ಬಂದಿರುವ ಭಾರತದಲ್ಲಿರುವಷ್ಟು 'ಅಂತರ್ ಜಾತೀಯ ಸಾಮರಸ್ಯ' ಇನ್ನೆಲ್ಲಿ ಇದೆಯೋ ನಾನರಿಯೆ. ಆದರೆ ಇದು ಇನ್ನೂ ಬಲವತ್ತರವಾಗಬೇಕು. ಕನ್ನಡಿಗರಲ್ಲಂತೂ ಸಹಿಷ್ಣುತೆ ಪರಮಾವಧಿಯನ್ನೂ ಚರಮ ಸೀಮೆಯನ್ನು ಮುಟ್ಟಿದೆಯೆಂಬುದಕ್ಕೆ ಇಲ್ಲಿನ ಶಿಲಾಭೇರಿಗಳು ಸಾಕ್ಷಿ, ಗುಡಿ-ಮಸೀದಿ ಚರ್ಚುಗಳು ಸಾಕ್ಷಿ, ಇತಿಹಾಸ ಸಾಕ್ಷಿ, ಸಾಹಿತ್ಯ ಸಾಕ್ಷಿ, ಜನಜೀವನ ಸಾಕ್ಷಿ!

ಇದು ಎಲ್ಲೆಡೆಯಲ್ಲಯೂ ಇರಬಾರದೇಕೆ? ಯಾರು ಧರ್ಮದ ಹೆಸರಿನಲ್ಲಿ ಅನ್ಯರನ್ನು ದ್ವೇಷಿಸಿರೆಂದು ಬೋಧಿಸಿದ್ದಾರೆ?

"ಸಮೋಽಹಂ ಸರ್ವಭೂತೇಷು ನ ಮೇ ದ್ವೇಷೋಽಸ್ತಿನ ಪ್ರಿಯಃ" ಎಂದು ಎಚ್ಚರಿಸಿದ್ದಾನೆ ಶ್ರೀಕೃಷ್ಣ ;

"No man liveth unto himself. . We are all parts of one another. . God hath made of one blood all nations that dwell upon the face of the earth" ಎಂದು ತಿಳಿಸಿದ್ದಾನೆ ಮಹಾತ್ಮ ಏಸುಕ್ರಿಸ್ತ ;

"ಅಲ್ ಖಲ್ಕೋ ಅಯ್ಯಾಲೆ ಇಲಾಹಿ-ಮಾನವರೆಲ್ಲ ದೇವನ ಕುಟುಂಬ" ಎಂದು ಮನಂಬುಗುವಂತೆ ಹೇಳಿದ್ದಾನೆ ಮಹಮ್ಮದ ಪೈಗಂಬರ ;

"And we worship the former religions of the world devoted to righteousness" ಎಂದು ಭರವಸೆಯಿತ್ತ ಝೋರಾಸ್ಟರ್ ;

ಬುದ್ಧ, ಮಹಾವೀರ, ಬಸವರು ತಮ್ಮ ಪೂರ್ವೋತ್ತರ ಅವತಾರಗಳನ್ನು ಉಲ್ಲೇಖಿಸಿ, ಏಸುಕ್ರಿಸ್ತರು. 'I come not to destroy the law of the prophets, but to fulfil them', ಎಂದು ಘೋಷಿಸಿ, ಮಹಮ್ಮದ ಪೈಗಂಬರರು 'ವಾಮಾ ಅರಸಲ್ನಾ ಮೀರಸೂಲಿನ್ ಬಿ ಲಿಸ್ಸಾನಿ ಕೌಮೇಹಿ, ವಾ ಕಜಾಲಿಕಾ ಓ ಹೈನಾ ಇಲೈಕಾ ಕುರಾನನ್ ಅರಬಿಯಲ್ಲೆ ಮುಂಜೇರಾ ಉಮ್ಮಲ್ ಕೋರಾ ವಾ ಮನ್ ಹೌಲಹಾ....ಮಾಲಾ ಜಾಽಲ್ನಾ ಹೊ ಕುರಾನನ್ ಆಜಮೀ ಯಾಲ್ ಲಾ ಕಾಲು ಲೌ ಲಾ ಫಸೀಲತ್ ಆಮಾ ತ ಹು—ಅವರವರ ಭಾಷೆಯಲ್ಲಿ ಬೋಧಿಸಲೆಂದು ಎಲ್ಲ ಜನಾಂಗಗಳಿಗೂ ಪ್ರವಾದಿಗಳು ಕಳುಹಿಸಲ್ಪಟ್ಟಿದ್ದಾರೆ ; ಅವರ ಮನದಲ್ಲಿ ಸಂಶಯ ಉಳಿಯದಿರಲೆಂಬುದೇ ಅಲ್ಲಾನ ಆಶಯ ; ಅರಬ್ಬೀ ಕುರಾಣವೂ ಇದೇ ರೀತಿ ಉದಯವಾಗಿದೆ. ಮಕ್ಕಾ ಮತ್ತು ಅದರ ಸುತ್ತಲಿನ ಜನ ತಮಗೆ ಗೊತ್ತಿರುವ ಮಾತಿನಲ್ಲಿ ಸತ್ಯವನ್ನರಿಯಲೆಂದು ; ಬೇರೆ ಭಾಷೆಗಳಲ್ಲಿ ಬಿತ್ತರಿಸಿದ್ದರೆ—'ನಮಗೆ ತಿಳಿಯುವಂತೆ ಏಕಿದನ್ನು ಬಿತ್ತರಿಸಲಿಲ್ಲವೆಂದು' ಅವರು ಖಂಡಿತ ಆಕ್ಷೇಪಿಸುತ್ತಿದ್ದರು" ಎಂದು ವಿಶದೀಕರಿಸಿ, ಕನ್ಫೂಷಿಯಸ್ಸನು, 'I only hand on; I cannot create new things' ಎಂದು ಸ್ಪಷ್ಟೀಕರಿಸಿ ಕರೆವ ಸುರಭಿಯ ಬಣ್ಣ ಯಾವುದಿದ್ದರೂ ಕರೆದ ಹಾಲಿನ ಬಣ್ಣ ಒಂದೇ ಎಂಬುದನ್ನು ದೃಢೀಕರಿಸಿದ್ದಾರೆ.

ಆದುದರಿಂದ ಧರ್ಮಾಧರ್ಮಗಳಲ್ಲಿರುವ ಸಾಮಾನ್ಯತೆಯ ಸುವರ್ಣಸೂತ್ರದಿಂದ ಸಾಮರಸ್ಯ ಸೌಮನಸ್ಯ ಸೌಹಾರ್ದ್ರಗಳನ್ನೂ ಬಲಪಡಿಸಬೇಕು. ಕ್ಷುದ್ರಭೇದಗಳನ್ನು ಉದ್ರೇಕಿಸಬಾರದು. ಸೂಫಿಗಳೊಬ್ಬರು ಹೇಳಿರುವಂತೆ—



'ತಫರಕಾ ದರ್ ನಫ್ಸೆ ಹೈವಾನಿ ಬುವದ್
ರೂಹೆ ವಾಹಿದ್ ರೂಹೆ ಇನ್ಸಾನಿ ಬುವದ್' — ಪ್ರತ್ಯೇಕತೆ, ಭೇದ ಭಾವ, ಅನೈಕಮತ್ಯ ಪಶುಸ್ವಭಾವದ ಪ್ರತೀಕ ; ಏಕತ್ವ ಮಾನವನ ಆತ್ಮವಂತಿಕೆಯ ದ್ಯೋತಕ.

'ಸರ್ವಭೂತೇಷು ಏಕ್ಯೈಕವಮ್
ಭಾವಮವ್ಯಯಮೀಕ್ಷತೇ
ಅವಿಭಕ್ತಂ ವಿಭಕ್ತೇಷು
ತದ್ ಜ್ಞಾನಂ ಸಾತ್ವಿಕಂ ಸ್ಮೃತಮ್ '

ಎಂಬ ಗೀತೋಕ್ತಿಯು ಸರ್ವ ಧರ್ಮೀಯರಲ್ಲಿ ಸಮನ್ವಯ ದೃಷ್ಟಿ ಅದೆಷ್ಟು ಅಗತ್ಯವೆಂಬುದನ್ನು ಅತ್ಯಂತ ಹೃದಯಸ್ಪರ್ಶಿಯಾಗಿ ವಿವರಿಸುತ್ತದೆ. ಇದೆಲ್ಲ ಸರಿ, ವಿಭಿನ್ನ ಧರ್ಮೀಯರಲ್ಲಿ ದ್ವೇಷಕ್ಕೆ ಕಾರಣ? ತಮ್ಮ ತಮ್ಮ ಧರ್ಮದಂತೆ ನಿಜವಾಗಿ ನಡೆಯುವವರ ನಡುವೆ ದ್ವೇಷ ಬರಲಾರದು. ಧರ್ಮದ ಹೆಸರನ್ನು ದುರುಪಯೋಗ ಪಡಿಸಿಕೊಳ್ಳುವವರ ನಡುವೆ ಕಡಿದಾಟ ಕಚ್ಚಾಟ ಹೆಚ್ಚು. 'Religion is necessary for the common man ; useful for the politician ; and useless for the philosopher' ಎಂದು ಗಿಬ್ಬನ್ ಹೇಳಿದಂತೆ ನೆನಪು. ಶ್ರೀ ಸಾಮಾನ್ಯರು ತಮ್ಮ ತಮ್ಮ ಧರ್ಮದಂತೆ ನಡೆದೂ ಸಮಾಜವನ್ನು ಒಡೆಯುವುದಿಲ್ಲ; ತತ್ತ್ವಜ್ಞರಿಗಂತೂ ಧರ್ಮದ ಅಗತ್ಯವೇ ಇಲ್ಲ; ಅನಾಹುತಕ್ಕೆ ಕಾರಣರಾಗುವವರು ಧರ್ಮವನ್ನು ತಮ್ಮಉಪಯೋಗಕ್ಕಾಗಿ ಬಳಸಿಕೊಳ್ಳುವ ಕೆಲವುರಾಜಕಾರಣಿಗಳು. ಹೀಗಾಗಬಾರದು. Food is above politics ಎಂದುಹೇಳುತ್ತಾರೆ; 'Religion is above politics ಎಂಬುದನ್ನು ಎಲ್ಲರೂ ಒಪ್ಪಿ ಅದರಂತೆ ಆಚರಿಸಬೇಕು. 'ಅದಕು ಇದಕು ಎದಕು' ಅದನ್ನು ಬಳಸಿ ಅದನ್ನೂ ನಮ್ಮೊಡನೆ ಅಧೋಗತಿಗೆಳೆಯಬಾರದು. ಕಳ ಹೋಗಿ ಸಿಕ್ಕಿಬಿದ್ದಿದ್ದ ಕಳ್ಳನೊಬ್ಬನನ್ನು ನೋಡಿ ಬಾಲಕ ರವೀಂದ್ರರು 'ಕವಿತೆ ಸಿಕ್ಕಿರುವಷ್ಟು ಜನರ ಕೈಗೆ ಕಳ್ಳನೂ ಸಿಕ್ಕಿರಲಾರ' ನೆಂದು ಉದ್ಗರಿಸಿದರು. ಧರ್ಮ ಸಿಕ್ಕಿರುವಷ್ಟು ಜನರ ಕೈಗೆ ಕವಿತೆಯೂ ಸಿಕ್ಕಲಾರದೆಂದು ನಾವು ಹೇಳಬಹುದು. ಧರ್ಮದ ದಳ್ಳಾಳಿಗಳ ಲೆಕ್ಕ ಮಾಡಬಲ್ಲವರಾರು? ಈ ದೇಶದಲ್ಲಂತೂ ಧರ್ಮದ ಹೆಸರಿನಲ್ಲಿ ರಿಣಗೂಳು ತಿನ್ನುತ್ತ ಬದುಕಿರುವವರ ಸಂಖ್ಯೆ ಅಗಣಿತವಾದುದು.

ಇವರಿಂದ ರೋಸಿಯೋ ಏನೋ ಇಂದು ಶಾಸನವನ್ನು ನಂಬಿ ನಡೆದಿದ್ದೇವೆ. ವರ್ಗರಹಿತ, ವರ್ಣರಹಿತ, ಶೋಷಣರಹಿತ ಸಮಾಜವನ್ನು ಸಮಾನತೆ, ಸಹೋದರತೆ, ಸ್ವತಂತ್ರತೆಗಳ ತಳಹದಿಯಮೇಲೆ ಕಟ್ಟಲು ಹೊರಟದ್ದೇವೆ. ಶಾಸನಗಳ ಸಹಾಯದಿಂದ. ಪಂಚಾಯತಿಗಳಿಂದ ಪಾರ್ಲಿಮೆಂಟಿನವರೆಗೆ ಬೃಹದಾಕಾರವಾಗಿ ಬೆಳೆದಿದೆ ಶಾಸನ ಪರಂಪರೆ. ಎಲ್ಲಿ ಯಾವುದೊಂದು ಸ್ಥಾನೀಯ, ವಿಶೇಷ, ಸಾಮಾನ್ಯ, ಸಾಮಾಜಿಕ, ಆರ್ಥಿಕ, ಆಡಳಿತದ, ನಗರಾಡಳಿತದ, ವಾಹನ ಸಂಚಾರದ ಶಾಸನವನ್ನು ಉಲ್ಲಂಘಿ

ಸುವೆವೋ ಎಂದು ಹೆಜ್ಜೆಹೆಜ್ಜೆಗೂ ಹೆದರುತ್ತಲೇ ಸಾಗಬೇಕಾಗಿದೆ. ಬಸವಣ್ಣನವರ ಕ್ಷಮೆಕೋರಿ ಅವರದೊಂದು ವಚನವನ್ನು ಈ ರೀತಿ ಮಾರ್ಪಡಿಸಿಕೊಳ್ಳಬಹುದೆಂದು ತೋರುತ್ತದೆ.

'ಹಳ್ಳಿಯ ಚಾವಡಿಗಳಲ್ಲಿ, ಗ್ರಾಮ ಪಂಚಾಯಿತಿಗಳಲ್ಲಿ,
ನಗರಸಭೆ, ಶಾಸನಸಭೆ, ರಾಜ್ಯಸಭೆ, ಲೋಕಸಭೆಗಳಲ್ಲಿ,
ಕಾರ್ಯಾಲಯ, ಕಾರ್ಖಾನೆ, ಮಾರುಕಟ್ಟೆಗಳಲ್ಲಿ,
ಚೌಪಥಗಳಲ್ಲಿ, ನಿಲ್ದಾಣಗಳಲ್ಲಿ, ನ್ಯಾಯಾಲಯಗಳಲ್ಲಿ.
ಮೂಲಶಾಸನ, ಆಡಳಿತಶಾಸನ, ನ್ಯಾಯಮೂರ್ತಿ ನಿರ್ಮಿತಶಾಸನ,
ಆ ಶಾಸನ ಈ ಶಾಸನ–ಯಾವು ಯಾವುನೋ ಶಾಸನವೆಂದು
ಕಾಲಿಡಲಿಂಬಿಲ್ಲ !'

ಅದರೂ ನೀತಿ ನೆಲೆಗೊಂಡಿಲ್ಲ, ಪ್ರೀತಿ ಒಡಮೂಡಲಿಲ್ಲ, ಭೀತಿ ಬಯಲಾಗಲಿಲ್ಲ, ಜಾತಿ ಜಾತಿಗಳಲ್ಲಿ ಜಗಳ ನಿಂತಿಲ್ಲ. ಧರ್ಮ ಸಾಧಿಸದೆ ಸೋತಲ್ಲಿ, ಶಾಸನ ಸಫಲವಾಗುವುದೆಂದು ಹೇಗೆ ನಂಬುವುದು ? ಪ್ರಾಯಶಃ ಎರಡೂ ಒಂದಕ್ಕೊಂದು ಪೂರಕವಾಗಿ ನಿಲ್ಲಬೇಕು, ಅನಿಷ್ಟಗಳನ್ನು ಗೆಲ್ಲಬೇಕು.

ಇದೂ ಸಾಲದು. ಮನುಷ್ಯ ನಾಗರಿಕನಾಗುವಮುನ್ನ, ಮುಸ್ಲಿಮನಾಗುವ ಮುನ್ನ , ಹಿಂದುವಾಗುವ ಮುನ್ನ, ಬೌದ್ಧನಾಗುವ ಮುನ್ನ, ಕ್ರೈಸ್ತನಾಗುವ ಮುನ್ನ ಮಾನವನಾಗಬೇಕು. ಮೊದಲು ಮಾನವನಾಗದೆ ಅವನು ನಿಜವಾದ ಹಿಂದುವಾಗಲಾರ, ಮುಸ್ಲಿಮನಾಗಲಾರ, ಕ್ರೈಸ್ತನಾಗಲಾರ, ಬೌದ್ಧನಾಗಲಾರ, ಜೈನ-ಸಿಖ್ಖ-ಪಾರಸಿಕನಾಗಲಾರ ; ಕೊನೆಗೆ ನಿಜವಾದ ನಾಸ್ತಿಕನೂ ಆಗಲಾರ. ಆದುದರಿಂದ ಮೊದಲು ಮಾನವನಾಗು !

ಓದಿ ಬ್ರಾಹ್ಮಣನಾಗು
ಕಾದಿ ಕ್ಷತ್ರಿಯನಾಗು
ಶೂದ್ರ ವೈಶ್ಯನೆ ಆಗು ದುಡಿದು ಗಳಿಸಿ
ಏನಾದರು ಆಗು ನಿನ್ನೊಲವಿನಂತಾಗು
ಏನಾದರು ಸರಿಯೆ–ಮೊದಲು ಮಾನವನಾಗು !
ರಾಜಕಾರಣಿಯಾಗು ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರು ಆಗು ಹಾರೈಸಿದಂತಾಗು
ಏನಾದರು ಸರಿಯೆ–ಮೊದಲು ಮಾನವನಾಗು
ಹಿಂದು ಮುಸ್ಲಿಮನಾಗು ಬೌದ್ಧ ಕ್ರೈಸ್ತನೆ ಆಗು
ಜೈನ ಪಾರಸಿ ಸಿಖ್ಖ ಚಾರ್ವಾಕನಾಗು
ಏನಾದರು ಆಗು ನೀ ಬಯಸಿದಂತಾಗು
ಏನಾದರು ಸರಿಯೆ ಮೊದಲು ಮಾನವನಾಗು !



ಯಾವುದೊಂದು ಸಂಸ್ಥೆ, ಧರ್ಮ, ಶಾಸನ, ದರ್ಶನ, ವಾದ, ಪಂಥ, ಗ್ರಂಥ, ಯೋಜನೆಯ ಒರೆಗಲ್ಲು ಅದು ನಿರ್ಮಿಸುವ ಮನುಷ್ಯನಲ್ಲವೆ ? ಮರ ಎಂಥದೆಂಬುದು ಫಲ ಎಂಥದೆಂಬುದರಿಂದ ಗೊತ್ತಾಗುವುದಿಲ್ಲವೆ? ಧರ್ಮ ದೊಡ್ಡದಿದ್ದರೇನು ಫಲ–ಆ ಧರ್ಮದ ಅನುಯಾಯಿಗಳು ಸಣ್ಣವರಾಗಿ ಬದುಕಿದರೆ? 'ಹೆಂಡೆಯ ಕೈಯಲ್ಲಿ ಚಂದ್ರಾಯುಧವಿದ್ದೇನು ಫಲ? ಅಂಧಕನ ಕೈಯಲ್ಲಿ ದರ್ಪಣವಿದ್ದೇನು ಫಲ? ಮಂಗನ ಕೈಯಲ್ಲಿ ಮಾಣಿಕ್ಯವಿದ್ದೇನು ಫಲ? ಕೂಡಲಸಂಗನರಿಯದವರ ಕೈಯಲ್ಲಿ ಲಿಂಗವಿದ್ದೇನು ಫಲ?

ಪರಮಾತ್ಮನು ತನಗಾಗಿ ವೃಕ್ಷ, ಪಕ್ಷಿ, ಪಶು, ಪಾಷಾಣಾದಿ ಅನೇಕ ಆಲಯಗಳನ್ನು ಮೊದಲು ನಿರ್ಮಿಸಿ ನೋಡಿದನೆಂದೂ, ಅವುಗಳಿಂದ ತುಷ್ಟನಾಗದೆ ಕೊನೆಗೆ ಮಾನವನ ನಿರ್ಮಾಣಮಾಡಿ ತೃಪ್ತನಾದನೆಂದೂ ಭಾಗವತ ಬಣ್ಣಿಸಿದೆ.* ಮಾನವನ ಬಗ್ಗೆ ಪರಮಾತ್ಮನ ಇತ್ತೀಚಿನ ಅನುಭವ ಏನನ್ನು ಹೇಳುತ್ತಿದೆಯೋ ಆ ಭಗವಂತನಿಗೆ ಗೊತ್ತು. ಆಶಾವಾದಿಗಳಾದ ಕವೀಂದ್ರ ರವೀಂದ್ರರು ಜಗತ್ತಿನಲ್ಲಿ ಹುಟ್ಟುವ ಪ್ರತಿಯೊಂದು ಹಸುಗೂಸೂ ಪರಮಾತ್ಮನಿನ್ನೂ ಮಾನವನ ಬಗ್ಗೆ ಬೇಸತ್ತಿಲ್ಲವೆಂಬುದನ್ನು ಸಾರಿಸಾರಿ·ಹೇಳುತ್ತದೆಯೆಂದು ಸಾರಿದ್ದಾರೆ.

ಇದು ನಿಜವಿರಬೇಕು. ಇಲ್ಲದಿದ್ದರೆ ಎಂದೋ ಮಾನವಸೃಷ್ಟಿಯನ್ನೇ ನಿಲ್ಲಿಸಿಬಿಡುತ್ತಿದ್ದ ಭಗವಂತ. ಸಹಸ್ರಕ್ಕೊಬ್ಬರಾದರೂ ಸತ್ಯರು ಹುಟ್ಟಿ, ಲಕ್ಷಕ್ಕೊಬ್ಬರಾದರೂ ಭಕ್ತರುಹುಟ್ಟಿ, ಕೋಟಿಗೊಬ್ಬರಾದರೂ ಶರಣರು ಹುಟ್ಟಿ ಪರಮಾತ್ಮನು ನಮ್ಮ ಬಗ್ಗೆ ಬೇಸತ್ತುಕೊಳ್ಳದಂತೆ ಮಾಡಿದ್ದಾರೆ. ನಮಗೆ ಪರಮಾತ್ಮ ಬೇಕಿರುವಂತೆ ಪರಮಾತ್ಮನಿಗೂ ನಾವು ಬೇಕೆಂದು ತೋರುತ್ತದೆ- ಇಲ್ಲದಿದ್ದರೆ ಅವನ ಮಹತಿಯನ್ನು ಗುರುತಿಸುವವರಾರು ? ಗುರುತಿಸಿ ಬಿತ್ತರಿಸುವವರಾರು ? ಆದುದರಿಂದಲೇ ಅಲ್ಲಮಪ್ರಭು ಸವಾಲುಹಾಕಿದ–'ನಾನಿಲ್ಲದಮುನ್ನ ನೀನೇನಾಗಿದ್ದೆ ಹೇಳಾ?' ಎಂದು. ಇನ್ನೇನಾಗಿದ್ದ–'ನೆನಹಿಲ್ಲದ ಘನವಸ್ತು' ವಾಗಿ ಸದ್ದಿಲ್ಲದೆ ಬಿದ್ದಿದ್ದ. ಮಾನವನ ಹುಟ್ಟನೊಡನೆ ಜಗತ್ಪಾವನನ ಹಿರಿಮೆಯೂ ಹೊರಬಿದ್ದಿತು. ಆದುದರಿಂದಲೇ ಮಾನವನು ಎಷ್ಟು ದೊಡ್ಡವನಾಗುವನೋ ಅವನ ದೇವನೂ ಅಷ್ಟೇ ದೊಡ್ಡವನಾಗುದನೆಂದು ಹೇಳುತ್ತಾರೆ. ಈ ಹೇಳಿಕೆಯಲ್ಲಿ ತಿರುಳಿಲ್ಲದಿಲ್ಲ. ನಾಗರಹಾವೇ ದೇವನೆಂದು ತಿಳಿದಿದ್ದ ಮಾನವ ಇಂದು ಮತ್ತೆ ಹುಟ್ಟಿಬಂದು ಅತ್ಯಾಧುನಿಕವಾದ ದೂರದರ್ಶಕ ಯಂತ್ರವೊಂದರ ಸಹಾಯದಿಂದ ದಿಗ್ಭ್ರಮೆಗೊಳಿಸುವ ನಕ್ಷತ್ರಲೋಕವನ್ನು ನೋಡಿದಾಗ 'ಜಗದಗಲ ಮುಗಿಲಗಲ, ಮಿಗೆಯಗಲ, ನಿಮ್ಮಗಲ'ವೆಂದು ಉದ್ಗರಿಸದಿರುವನೆ? ಅವನ

---

*ಸೃಷ್ಟ್ವಾ ಪುರಾನಿ ವಿವಿಧಾನ್ಯಯಜಾತ್ಮಶಕ್ತ್ಯಾ
ವೃಕ್ಷಾನ್ ಸರಿಸೃ ಪಶೂನ್ ಖಗದಂಶ ಮತ್ಸ್ಯಾನ್ ।
ತೈಸ್ತೈರತುಷ್ಟ ಹೃದಯೋ ಮನುಜಂ ವಿಧಾಯ
ಬ್ರಹ್ಮಾವಬೋಧ ಧಿಷಣಮ್ ಮುದಮಾಪ ದೇವಃ

ಜ್ಞಾನದೊಡನೆ ದೇವಸ್ಥಾನವೂ ದೊಡ್ಡದಾಗಲಿಲ್ಲವೆ ?

ಆದುದರಿಂದಲೇ "ತನ್ನನರಸಿ ಬಪ್ಪವರ ತಾನರಸಿ ಬಪ್ಪ'ನಾತ. ಹೃದಯದ ಬಾಗಿಲ ತೆರೆದಿದ್ದರೆ ಒಳಗೆ ಬರುವ. ನಾವೇ ಬಾಗಿಲ ಮುಚ್ಚಿ ಬಿಯಗ ಹಾಕಿದ್ದರೆ ಆತನ ತಪ್ಪೇನು ? ನಾವೇ ಅವನನ್ನು ಬಯಸದೆ ಇನ್ನೇನನ್ನೋ ಬಯಸಿ, ಭ್ರಮಿಸಿ, ಬಸವಳಿದು ಬಿಸುಸುಯ್ದರೆ ಅತನ ತಪ್ಪೇನು ?

"The heavens are calling you, and wheel round you,
Displaying to you their eternal beauties
And still your eye is looking on the ground"

ಎಂದು ನೊಂದು ಹೇಳಿದ್ದಾನೆ ಡಾಂಟೇ. ಉಪನಿಷತ್ತಿನ ಎರಡು ಪಕ್ಷಿಗಳ ದೃಷ್ಟಾಂತ ಪ್ರಸಿದ್ಧವಾಗಿಯೇ ಇದೆ. ಹೃದಯದಲ್ಲಿ ಹುದುಗಿರುವ ಕೀಳು ಕಾಮನೆಗಳು ಕಮರಿ ಹೋದರೆ ಮರ್ತ್ಯನು ಅಮೃತ ಪುತ್ರನಾಗುತ್ತಾನೆ ; ದೇಹಿಯಾಗಿದ್ದೂ ಬ್ರಹ್ಮಸ್ಪರ್ಶಿಯಾಗುತ್ತಾನೆಂದೂ ಕಠೋಪನಿಷತ್ತು ಸಾರಿದೆ.*

ಹೃದಯವು ಅವನಿಗೆ ತಕ್ಕ ಸದನವಾಗಬೇಕು.–ಆಗ ಅಲ್ಲಿಯೇ ಉದಯವಾಗುವ ಅಲ್ಲಾ–ಈಶ್ವರ–ಆಲ್‌ಮೈಟ್ಟಿ ! ಈ ಹೃದಯ ಶುದ್ಧಿ ಸುಲಭವಾಗಿ ದೊರೆಯುವುದಿಲ್ಲ. ಮನವಚನಕಾಯ ಶುದ್ಧವಾದಾಗ ಹೃದಯವೂ ಶುದ್ಧವಾಗುತ್ತದೆ. ಅಂಥ ಹೃದಯದಲ್ಲಿ ಅವನ ಉದಯ.§ ಆಗ ' ಕಲಖುಲ್ ಇನ್ಸಾನ್ ಬೈತುರ್ರಹಿಮಾನ್'– ಮಾನವನ ಹೃದಯ ಶಿವಾಲಯ.

ಎಲ್ಲ ಧರ್ಮಗಳ ಗುರಿ ಇದೇ– ಹೃದಯವನ್ನು ಅವನ ಸದನವನ್ನಾಗಿ ಮಾರ್ಪಡಿಸುವುದು ; ಇದೇ ಲೋಕದಲ್ಲಿ, ಇದೇ ಜನ್ಮದಲ್ಲಿ, ಇದೇ ದೇಹದಲ್ಲಿ ದಿವ್ಯಾನುಭವವನ್ನು ದಿವ್ಯಾನಂದವನ್ನೂ, ದಿವ್ಯ ದರ್ಶನವನ್ನು ಪಡೆಯುವುದು. ಧರ್ಮವು ನಾವು ಈ ಲೋಕದಲ್ಲಿ ಮಾಡುವ ಪುಣ್ಯಕ್ಕೆ ಇನ್ನೊಂದು ಲೋಕದಲ್ಲಿ ಫಲ ನೀಡುವುದೆಂಬುದು ಮರವೆ, ಮರುಳು. ಇಲ್ಲಿದ್ದುದೇ ಅಲ್ಲದೆ, ಅಲ್ಲಿದ್ದುದು ಇಲ್ಲಿದೆ–ಯದೇವೇಹ ತದಮುತ್ರ ಯದಮುತ್ರ ತದನ್ವಿತಂ–ಇದು ಅಲ್ಲವೆನ್ನುವವನು ಸಾವಿನಿಂದ ಸಾವಿಗೆ ಸಾಗುತ್ತಾನೆ. ' ಮೃತ್ಯೋಃ ಸಮೃತ್ಯು ಮಾಪ್ನೋತಿ ಯ ಇಹ ನಾನೇವ ಪಶ್ಯಾತಿ ' ಎಂದು ಎಚ್ಚರಿಸಿದೆ ಕಠೋಪನಿಷತ್ ; 'ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ' ಎಂದು ಬೋಧಿಸಿದ್ದಾರೆ ಬಸವಣ್ಣನವರು.

---

* ಯಡಾ ಸರ್ವೇ ಪ್ರಮುಚ್ಯಂತೇ ಕಾಮಾ ಯೋಽಸ್ಯ ಹೃದಿ ಶ್ರಿತಾಃ
ಅಯ ಮರ್ತ್ಯೋಽ ಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತೇ

§ ಮನ ವಚನ ಕಾಯ ಶುದ್ಧವಾಗಿಪ್ಪಾತನ ಹೃದಯದಲ್ಲಿ ನಿನ್ನ
ಕಂಡೆನೆಂದಾತ ಅಂಬಿಗರ ಚೌಡಯ್ಯ.'



ಧರ್ಮವನ್ನವಲಂಬಿಸಿ ಇಲ್ಲಿ ಸಲ್ಲದೆ ಹೋದರೆ ಧರ್ಮಕ್ಕೆ ನಾವೇ ಕಲಂಕ ಹಚ್ಚಿದ ಪಾಪಕ್ಕೆ ಗುರಿಯಾಗುತ್ತೇವೆ. ನಮ್ಮನಮ್ಮ ಧರ್ಮದ ಬಗ್ಗೆ ನಮಗೆ ನಿಜವಾದ ಅಭಿಮಾನವಿದ್ದರೆ ನಾವು ಈ ಪಾಪವನ್ನು ಮಾಡಬಾರದು. ಧರ್ಮದ ವರದಾನವನ್ನು ಪಡೆದು ಇನ್ನೇನಾಗದಿದ್ದರೂ ಒಳ್ಳೆಯ ಮಾನವರಾಗಿ, ತನ್ನಂತೆ ಪರರ ಬಗೆದು, ತನಗೆ ಬೇಡವಾದುದನ್ನು ಅನ್ಯರಿಗೆ ಬಯಸದೆ, ಕಾಣದಪರಮಾತ್ಮನನ್ನು ಪ್ರೀತಿಸುವ ಮೊದಲು ಕಾಣುವ ಅವನ ಮಕ್ಕಳನ್ನು ಪ್ರೀತಿಸಿ, ಧರ್ಮವು Love-in-action ಎಂಬುದನ್ನು ಸ್ಥಿರೀಕರಿಸಿ ಇಲ್ಲಿ ಲೇಸೆನಿಕೊಂಡು ಬಾಳಿ ಅಲ್ಲಿಗೆ ಭೀತಿಯ ಲವಲೇಶವಿಲ್ಲದೆ ಹೋಗುವುದು ಗುರಿಗಳಲ್ಲಿಗುರಿ, ಅರದ ಸಾರ, ಹೀಗೆ ಬಾಳುವವ ಸರ್ವಜ್ಞನಂತೆ 'ಜಾತಿ ಜಾತಿಗೆ ವೈರ, ನೀತಿ ಮೂರ್ಖಗೆ ವೈರ, ಪಾತಕವು ವೈರ ಸುಜನರ್ಗೆ, ಅರಿದಂಗೆ ಯಾತರದು ವೈರ ?' ಎಂದು ಕೇಳಿಯಾನು ; 'ಊರೆಲ್ಲ ನೆಂಟರು, ಕೇರಿಯೆಲ್ಲವು ಬಳಗ, ಧಾರುಣಿಯೆ ನನ್ನ ಕುಲದೈವವಾಗಿರಲು ಯಾರನ್ನು ಬಿಡಲಿ ?' ಎಂದು ಪ್ರಶ್ನಿಸಿಯಾನು.

ಎಲ್ಲರೂ ಇಂಥ ಬಾಳನ್ನೆ ಬಯಸಿ ಪಡೆಯುವಂತೆ ಇಂಥ ಸರ್ವಧರ್ಮ ಸಮ್ಮೇಳನಗಳು ಪ್ರೇರೇಪಿಸಲಿ, ಪ್ರಚೋದಿಸಲಿ. ಧರ್ಮದ ಧಾರಣಶಕ್ತಿ ದೇಶಕ್ಕೂ ದೇಶವಾಸಿಗಳಿಗೂ ಅಭಯ ರಕ್ಷೆಯಾಗಿ ಉಳಿದು ಗಾಂಧೀಜಿಯವರು ಹಾರೈಸಿದಂತೆ ಧಾರ್ಮಿಕ ಪಾರಮ್ಯದ ಪರಮ ಪದವಿ ಭಾರತಕ್ಕೆ ದೊರೆಯಲಿ. 'ಧರ್ಮಕ್ಕೆ ಜಯವೆಂಬ ದಿವ್ಯ ಮಂತ್ರ' ಒಣಗುಮಾತಲ್ಲ, ಸತ್ಯಸ್ಯ ಸತ್ಯವೆಂಬುದನ್ನು ಭಾರತೀಯರು ಸಿದ್ಧ ಮಾಡಿತೋರಿಸಲಿ ತಮ್ಮ ಬೆಳಕಿನ ಬಾಳಿನಿಂದ.

ಶಿವಮಸ್ತು ಸರ್ವ ಜಗಾತಾಂ !